# ಶ್ರೀರಾಮಕೃಷ್ಣರು ಕಂಡ ದಿವ್ಯರೂಪಗಳು

ಸ್ವರ್ಣಗೌರಿ

ಭಗವಂತನ ವಿವಿಧ ಆವಿರ್ಭಾವಗಳೆಲ್ಲವೂ ಸತ್ಯ ಎಂಬುದನ್ನು ಶ್ರೀರಾಮಕೃಷ್ಣರು ತಮ್ಮ ಗಾಢ ಆಧ್ಯಾತ್ಮಿಕ ಅನುಭಗಳಿಂದ ದೃಢೀಕರಿಸಿದ್ದಾರೆ. ಈ ಅನುಭವಗಳ ಅವಲೋಕನದಿಂದ ಸಾಧಕರು ತಮ್ಮತಮ್ಮ ಆಧ್ಯಾತ್ಮಿಕ ಆದರ್ಶಗಳನ್ನು ಪೂರ್ಣಗೊಳಿಸಿಕೊಳ್ಳಬಹುದಾಗಿದೆ. ಈ ವಿಷಯವಾಗಿ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

ನಾಮರೂಪಗಳೆಂದರೆ ಪ್ರಪಂಚ, ಪ್ರಪಂಚವೆಂದರೇನೆ ನಾಮರೂಪ. ಈ ಬಾಹ್ಯ ಜಗತ್ತು ಹೇಗೆ ನಾಮರೂಪಗಳಿಂದ ಉಂಟಾಗಿದೆಯೋ ಹಾಗೆಯೇ ದ್ವೈತಜಗತ್ತಿನಲ್ಲಿ ಭಗವತ್ ತತ್ತ್ವಕ್ಕೂ ಅನೇಕ ನಾಮರೂಪಗಳಿವೆ. **'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್'** *(ಗೀತಾ, ೪.೭)* ಎಂಬ ಶ್ರೀಕೃಷ್ಣನ ಆಶ್ವಾಸನಕ್ಕೆ ಅನುಸಾರವಾಗಿ, ಆಯಾ ಯುಗದ ಆವಶ್ಯಕತೆಗಳಿಗೆ ಅನುಗುಣವಾಗಿ ಆ ಭಗವತ್‌ತತ್ತ್ವ ಅನೇಕ ರೂಪಗಳಲ್ಲಿ ವ್ಯಕ್ತಗೊಂಡಿದೆ.

ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರು ಅವತರಿಸಿದ ಹಲವು ಕಾರಣಗಳಲ್ಲಿ ಸರ್ವಧರ್ಮ ಸಮನ್ವಯವು ಒಂದು ಮುಖ್ಯ ಕಾರಣವೆಂದು ಹೇಳಬಹುದು. ಇದನ್ನು ಅವರು ಸಾಧಿಸಿದಾದ್ದರೂ ಹೇಗೆ? ಆ ಭಗವಂತನ ವಿವಿಧ ರೂಪಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ **'ಏಕಂ ಸತ್ ವಿಪ್ರಾಃ ಬಹುಧಾ ವದಂತಿ'** ಎಂಬ ಶಾಸ್ತ್ರವಾಕ್ಯದ ಸತ್ಯಾಸತ್ಯತೆಯನ್ನು ನಿರೂಪಿಸಿದ್ದಾರೆ. ಶ್ರೀರಾಮಕೃಷ್ಣರು ಹಲವು ಸಾಧನೆಯ ಮಾರ್ಗಗಳನ್ನು ಅನುಸರಿಸಿ, ಅವುಗಳಲ್ಲೆಲ್ಲ ಪರಿಣಿತರಾಗಿ ಅತ್ಯಂತ ಕ್ಷಿಪ್ರವಾಗಿ ಗುರಿ ತಲುಪಿದರು. 'ಪ್ರತಿಯೊಂದು ಮಾರ್ಗವೂ ಸತ್ಯ; ಎಷ್ಟು ಮತಗಳೋ ಅಷ್ಟು ಮಾರ್ಗಗಳು' ಎಂಬ ಸತ್ಯವನ್ನು ಜಗತ್ತಿಗೆ ಸಾರಿದರು. ಜನ ನಂಬಲಿ ಎಂಬ ಕಾರಣಕ್ಕಾಗಿ ಅವರು ಪ್ರತಿಯೊಂದನ್ನೂ ಸಾಧನೆಯ ಮೂಲಕ ಅನುಭವಿಸಿದರು. ಶ್ರೀರಾಮಕೃಷ್ಣರ ಒಂದೊಂದು ಸಾಧನೆಯೂ ಬೆಚ್ಚಿ ಬೀಳಿಸುವಂತಹುದೆ. ಸಾಮಾನ್ಯ ವ್ಯಕ್ತಿಗಳಿಗೆ ಒಂದು ಆಧ್ಯಾತ್ಮಿಕ ಮಾರ್ಗದಲ್ಲಿ ಸಾಧನೆ ಮಾಡಿ ಗುರಿ ತಲುಪಲು ಇಡೀ ಜನ್ಮವೇ ಬೇಕಾಗಬಹುದು; ಹಲವರಿಗೆ ಒಂದು ಜನ್ಮ ಸಾಲದು. ಅಂತಹುದರಲ್ಲಿ ಸಾಂಪ್ರದಾಯಿಕ ಪೂಜಾವಿಧಾನ, ವೈಷ್ಣವ ಸಾಧನೆ, ಇತರ ಧರ್ಮಗಳ ವಿಧಾನದಲ್ಲಿ ಸಾಧನೆ — ಪ್ರತಿಯೊಂದರಲ್ಲೂ ಅವರು ಪಡೆದ ಪರಿಪೂರ್ಣತೆ, ಇಡೀ ಪ್ರಪಂಚದ ಧಾರ್ಮಿಕ ಇತಿಹಾಸದಲ್ಲೇ ಅಭೂತಪೂರ್ವ. ಈ ಸಾಧನೆಗಳ ಸರಮಾಲೆ ಆಯಾ ಮಾರ್ಗಗಳನ್ನೇ ದೃಢೀಕರಿಸುವಂತಿದೆ. ಆಯಾ ಪಂಥಗಳ ಅಸ್ತಿತ್ವವನ್ನು ಪುಷ್ಟೀಕರಿಸುವಂತಿದೆ. **'ಜನ್ಮ ಕರ್ಮ ಚ ಮೇ ದಿವ್ಯಂ'** *(ಗೀತಾ, ೪.೯)* ಎಂಬ ಗೀತೆಯ ಮಾತು ನಿಜವಾಗಿ ಅರ್ಥವಾಗುವುದು ಶ್ರೀರಾಮಕೃಷ್ಣರ ಅದ್ಭುತ ಜೀವನವನ್ನು ತಿಳಿದಾಗ.

ಶ್ರೀರಾಮಕೃಷ್ಣರು ಕಂಡ ದಿವ್ಯರೂಪಗಳನ್ನು ಈಗ ಕೂಲಂಕಷವಾಗಿ ನೋಡೋಣ:




## ಜಗನ್ಮಾತೆಯ ದಿವ್ಯರೂಪ

'ಹೊಟ್ಟೆ ಹೊರೆಯುವ ವಿದ್ಯೆ ನನಗೆ ಬೇಡ' ಎಂಬ ನಿಲುವಿನ ಮೂಲಕ ಬಾಲ್ಯದಲ್ಲೇ ಆಧ್ಯಾತ್ಮಿಕ ಪ್ರವೃತ್ತಿಯೆಡೆಗೆ ಶ್ರೀರಾಮಕೃಷ್ಣರಿಗಿದ್ದ ಒಲವು ಪರಿಚಯವಾಯಿತು. ಪಿತೃಸಮಾನರಾದ ಅಣ್ಣನನ್ನು ಕಳೆದುಕೊಂಡ ಮೇಲಂತೂ ಸಂಸಾರದ ಅನಿತ್ಯತೆಯ ಭಾವನೆ ಮತ್ತೂ ದೃಢವಾಗಿ ವೈರಾಗ್ಯದ ಬೆಂಕಿ ಇನ್ನೂ ಜೋರಾಗಿ ಪ್ರಜ್ವಲಿಸತೊಡಗಿತು. ತಾವು ನಿತ್ಯವೂ ಪೂಜಿಸುತ್ತಿದ್ದ ಆ ದೇವಿಯ ದರ್ಶನಕ್ಕಾಗಿ ಅವರ ಹೃದಯ ತೀವ್ರ ವೇದನೆಯಿಂದ ಚಡಪಡಿಸತೊಡಗಿತು. ಒಂದು ದಿನ ಈ ಅಸಹನೀಯ ವೇದನೆ ತಾಳಲಾರದೆ ಜೀವನ ಕೊನೆಗೊಳಿಸಬೇಕೆನ್ನುವಷ್ಟರಲ್ಲಿ ಚೈತನ್ಯಘನಳೂ, ವರಾಭಯಕರಳೂ ಆದ ಜಗನ್ಮಾತೆಯ ದಿವ್ಯಜ್ಯೋತಿಯ ದರ್ಶನವಾಯಿತು. ಈ ಅನುಭವವನ್ನು ಅವರ ಮಾತಲ್ಲೇ ಕೇಳೋಣ: ''ಮನೆ, ಬಾಗಿಲು, ಮಂದಿರ ಎಲ್ಲ ಮಾಯವಾದವು – ಎಲ್ಲೂ ಏನೂ ಕಾಣಿಸುತ್ತಿಲ್ಲ. ಕೇವಲ ಅಸೀಮ ಅನಂತ ಜ್ಯೋತಿಃಸಮುದ್ರವೊಂದೇ ಕಾಣುತ್ತಿದೆ. ಎಲ್ಲಿ ನೋಡಿದರೂ, ಎಷ್ಟೇ ದೂರ ಕಣ್ಣು ಹಾಯಿಸಿದರೂ ನಾಲ್ಕು ಕಡೆಯೂ ಅದರ ಉಜ್ವಲ ಜ್ವಾಲೆಗಳ ಮಾಲೆಯು ಭೋರ್ಗರೆಯುತ್ತ ಎಲ್ಲವನ್ನೂ ನುಂಗಿ ಹಾಕುವಂತೆ ಮುನ್ನುಗ್ಗುತ್ತಿತ್ತು. ನೋಡುತ್ತಿದ್ದಂತೆಯೇ ಅದು ನನ್ನ ಮೇಲೆ ಎರಗಿ ನನ್ನನ್ನು ಎಲ್ಲಿಯೋ ಮುಳುಗಿಸಿಬಿಟ್ಟಿತು. ನಾನು ಏಳುತ್ತ ಮುಳುಗುತ್ತ ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟೆ.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂಪುಟ ೧, ಪು. ೧೪೭–೪೮)* ಹೀಗೆ ಎರಡು ದಿನ ಪ್ರಜ್ಞಾಶೂನ್ಯರಾಗಿದ್ದ ಅವರಿಗೆ ಈ ಘಟನೆಯ ನಂತರ ತಾಯಿಯ ಚಿನ್ಮಯ

ಮೂರ್ತಿಯನ್ನು ಸದಾ ನೋಡುತ್ತಿರಬೇಕೆಂಬ ಹಂಬಲ ಉದಯಿಸಿತು. ಆ ವ್ಯಾಕುಲತೆಯ ತೀವ್ರತೆಯಿಂದಾಗಿ ಆ ವರಾಭಯಕರ ಚಿನ್ಮಯಮೂರ್ತಿ ನಗುವುದನ್ನು, ಮಾತನಾಡುವುದನ್ನು, ಸಾಂತ್ವನ ನೀಡುವುದನ್ನು ಸದಾ ಕಾಣತೊಡಗಿದರು. ಧ್ಯಾನ ಮತ್ತು ಪೂಜೆ ಮಾಡುತ್ತಿರುವಾಗ ಕಲ್ಲಿನ ವಿಗ್ರಹದಲ್ಲಿ ಜೀವಂತ ಮೂರ್ತಿಯನ್ನು ಕಾಣುತ್ತಿದ್ದರು. ಮೂಗಿಗೆ ಕೈಯಿಟ್ಟು ನೋಡಿದಾಗ ಉಸಿರಾಡುವುದು ಗೊತ್ತಾಗುತ್ತಿತ್ತು ಎನ್ನುತ್ತಿದ್ದರು. ಒಮ್ಮೊಮ್ಮೆ ತಾಯಿಯು ಮಹಡಿಯ ಮೇಲೆ ಕೂದಲನ್ನು ಹರಹಿಕೊಂಡು ಒಮ್ಮೆ ಕಲ್ಕತ್ತೆಯ ಕಡೆ, ಮತ್ತೊಮ್ಮೆ ಗಂಗೆಯ ಕಡೆ ನೋಡುತ್ತಿರುವುದನ್ನು ದರ್ಶಿಸಿದ್ದರಂತೆ.

### ರಾಮಗತಪ್ರಾಣ ಸೀತಾದೇವಿಯ ದರ್ಶನ



ಜಗನ್ಮಾತೆಯ ದರ್ಶನದಿಂದ ತೃಪ್ತರಾಗದ ಶ್ರೀರಾಮಕೃಷ್ಣರ ಮನಸ್ಸು ಈಗ ತಮ್ಮ ಕುಲ ದೇವತೆ ರಘುವೀರನ ಕಡೆಗೆ ಹರಿಯಿತು. ಹನುಮಂತನಿಗಿದ್ದ ಅನನ್ಯ ಭಕ್ತಿಯಿಂದಲೇ ಶ್ರೀರಾಮ ಚಂದ್ರನ ದರ್ಶನವಾಗುವುದು ಎಂದು ಭಾವಿಸಿ ದಾಸ್ಯಭಾವದಲ್ಲಿ ಸಾಧನೆ ಮಾಡತೊಡಗಿದರು. ಆ ಭಾವದಲ್ಲಿ ಅದೆಷ್ಟು ತನ್ಮಯರಾಗಿದ್ದರೆಂದರೆ ಅವರ ಆಹಾರವಿಹಾರಗಳೆಲ್ಲಾ ಹನುಮಂತನಂತೆ ಇರುತ್ತಿದ್ದವು. ಫಲಮೂಲಾದಿಗಳನ್ನಲ್ಲದೆ ಬೇರೇನೂ ಸೇವಿಸುತ್ತಿರಲಿಲ್ಲ. ಅದನ್ನು ಸಿಪ್ಪೆ ತೆಗೆಯದೆ ತಿಂದು ಬಿಡುತ್ತಿದ್ದರು. ಮರದ ಮೇಲೆಯೇ ಹೆಚ್ಚು ಸಮಯ ಕಳೆಯುತ್ತಿದ್ದ ಅವರ ಕಣ್ಣುಗಳು ಚಂಚಲವಾಗಿರುತ್ತಿದ್ದವು. ಮತ್ತೊಂದು ಆಶ್ಚರ್ಯಕರ ಸಂಗತಿಯೆಂದರೆ ಬೆನ್ನೆಲುಬಿನ ತಳಭಾಗ ದಲ್ಲಿ ಮೂಳೆಯು ಒಂದು ಇಂಚು ಮುಂದೆ ಬಂದಿತ್ತು.

ಒಂದು ದಿನ ಅವರು ಪಂಚವಟಿಯಲ್ಲಿ ಸುಮ್ಮನೆ ಕುಳಿತಿದ್ದಾಗ ಇದ್ದಕ್ಕಿದ್ದಂತೆ ಒಂದು ಸ್ತ್ರೀಮೂರ್ತಿ ಸುತ್ತಲಿನ ಪ್ರದೇಶವನ್ನು ಬೆಳಗುತ್ತ ಪ್ರತ್ಯಕ್ಷವಾಯಿತು. ಪ್ರೇಮ, ದುಃಖ, ಕರುಣೆ, ಸಹಿಷ್ಣುತಾಪೂರ್ಣವಾದ ಅಪೂರ್ವ ತೇಜಸ್ಸು ಮತ್ತು ಗಾಂಭೀರ್ಯಗಳಿಂದ ಕೂಡಿದ ಆ ದೇವಿ ಮಾನವಿಯು ಪ್ರಸನ್ನ ದೃಷ್ಟಿಯಿಂದ ಮುಗ್ಧಗೊಳಿಸುತ್ತ ಇವರೆಡೆಗೆ ಹೆಜ್ಜೆ ಹಾಕತೊಡಗಿದಳು. ಚಕಿತರಾದ ಶ್ರೀರಾಮಕೃಷ್ಣರು, 'ಯಾರೀಕೆ?' ಎಂದು ಯೋಚಿಸುತ್ತಿರುವಂತೆ ಕಪಿಯೊಂದು ಓಡಿಬಂದು ಆಕೆಯ ಪಾದದಡಿಯಲ್ಲಿ ಹೊರಳಾಡತೊಡಗಿತು. ತಕ್ಷಣ ಆಕೆ ರಾಮಗತಪ್ರಾಣಳಾದ ಸೀತೆ ಎಂದು ಅವರಿಗೆ ಹೊಳೆಯಿತು. ಆಕೆಯ ಪಾದಕ್ಕೆರಗಬೇಕು ಎನ್ನುವಷ್ಟರಲ್ಲಿ ಆಕೆಯೇ ಇವರೊಳಗೆ ಐಕ್ಯ ಳಾಗಿಬಿಟ್ಟಳು. ಜಗನ್ಮಾತೆಯ ದರ್ಶನದಲ್ಲಿ ಆದಂತೆ, ಈಗಲೂ ಶ್ರೀರಾಮಕೃಷ್ಣರು ಬಾಹ್ಯಜ್ಞಾನಶೂನ್ಯರಾಗಿಬಿಟ್ಟರು.



### ಚೈತನ್ಯ ನಿತ್ಯಾನಂದರ ಬಾಲ್ಯರೂಪ

ಉತ್ತರ ಭಾರತದ ಮಹಾನ್ ಸಂತಶ್ರೇಷ್ಠ ಚೈತನ್ಯರು ಗೋಪಿಯರ ಪ್ರೇಮೋನ್ಮಾದಕ್ಕೆ ಆದರ್ಶವಾಗಿರುವರು. ದೊಡ್ಡ ವಿದ್ವಾಂಸರ ವಂಶದಲ್ಲಿ ಜನಿಸಿ, ನ್ಯಾಯವನ್ನು ಬೋಧಿಸುತ್ತಾ, ತರ್ಕದಲ್ಲಿ ಎಲ್ಲರನ್ನೂ ಸೋಲಿಸುತ್ತಿದ್ದರು. ಇದೇ ಜೀವನದ ಆದರ್ಶವೆಂದು ಭಾವಿಸಿದ್ದ ಚೈತನ್ಯರ ಜೀವನವೇ ಬೇರೆ ರೂಪ ತಾಳಿತು. ಒಬ್ಬ ಮಹಾಪುರುಷರ ದಯೆಯಿಂದ ಸರ್ವಶ್ರೇಷ್ಠ ಭಕ್ತ ರಾದ ಇವರು ಬಂಗಾಳ ಭೂಮಿಯ ಮೇಲೆಲ್ಲಾ ಭಕ್ತಿತರಂಗಗಳನ್ನು ಹರಿಸಿದರು. ಅವರ ಪ್ರೇಮಕ್ಕೆ ಮೇರೆಯೇ ಇರಲಿಲ್ಲ. ಸಾಧು, ಅಸಾಧು, ಹಿಂದೂ, ಮುಸಲ್ಮಾನ, ಪವಿತ್ರ, ಅಪವಿತ್ರ, ವೇಶ್ಯೆ, ಪತಿತ ಎಲ್ಲರೂ ಅವರ ಪ್ರೇಮಕ್ಕೆ ಭಾಗಿಗಳಾಗಿದ್ದರು.

ಒಮ್ಮೆ ಶ್ರೀರಾಮಕೃಷ್ಣರು ತಮ್ಮ ಜನ್ಮಸ್ಥಳವಾದ ಕಾಮಾರಪುಕುರಕ್ಕೆ ಹೋಗಿದ್ದರು. ಅವರಿಗೆ ಅಲ್ಲೊಂದು ಅಪೂರ್ವವಾದ ಅನುಭವ ಕಾದಿತ್ತು. ತಮ್ಮ ಸೋದರಳಿಯ ಹೃದಯನೊಡನೆ ಪಲ್ಲಕ್ಕಿಯಲ್ಲಿ ಕುಳಿತು ದಾರಿಯಲ್ಲಿನ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಾ, ಆನಂದದಿಂದ ಶಿಹೋರಿಗೆ (ಹೃದಯನ ಜನ್ಮ ಸ್ಥಳ) ಹೋಗುತ್ತಿದ್ದರು. ಅದೇ ಸಮಯದಲ್ಲಿ ತಮ್ಮ ದೇಹದಿಂದ ಎಳೆಯ ವಯಸ್ಸಿನ ಇಬ್ಬರು ಸುಂದರ ಬಾಲಕರು ಹೊರಬಂದುದನ್ನು ನೋಡಿದರು. ಆ ಬಾಲಕರು ಹಾಸ್ಯ ಮಾಡುತ್ತಾ, ನಗುತ್ತಾ, ಮಾತನಾಡುತ್ತಾ ಆನಂದದಿಂದ ವಿಹರಿಸುತ್ತಾ ಬಹಳ ಹೊತ್ತಾದ ಬಳಿಕ ಶ್ರೀರಾಮಕೃಷ್ಣರ ದೇಹವನ್ನು ಮತ್ತೆ ಪ್ರವೇಶಿಸಿದರು. ಈ ದರ್ಶನವಾದ ಒಂದೂವರೆ ವರ್ಷಗಳ ನಂತರ ಆ ಸುಂದರ ರೂಪಿನ ಬಾಲಕರು ಚೈತನ್ಯ ಮತ್ತು ನಿತ್ಯಾನಂದರೆಂದು ಶ್ರೀರಾಮಕೃಷ್ಣರಿಗೆ ತಿಳಿಯಿತು.

### ಶ್ರೀರಾಮಚಂದ್ರನ ದಿವ್ಯ ಬಾಲರೂಪ

ಬಹುಶಃ ೧೮೬೪ರಲ್ಲಿ, ಜಟಾಧಾರಿ ಎಂಬ ರಾಮಾಯತ ಸಂಪ್ರದಾಯದ ಸಾಧು ದಕ್ಷಿಣೇಶ್ವರಕ್ಕೆ ಬಂದರು. ಆ ಸಾಧು ಬಾಲ ರಾಮ ಚಂದ್ರನ ಲೋಹದ ವಿಗ್ರಹವನ್ನು ಸದಾ ತಮ್ಮ ಬಳಿ ಇಟ್ಟುಕೊಂಡಿರುತ್ತಿದ್ದರು. ಆ ಮೂರ್ತಿಯ ಬಹುಕಾಲದ ಸೇವೆಯಿಂದ ಆ ಸಾಧು

ವಿನ ಭಕ್ತಿ ಎಷ್ಟು ಪರಿಣಿತವಾಗಿತ್ತೆಂದರೆ ಬಾಲರಾಮನು ಆ ವಿಗ್ರಹದಲ್ಲಿ ಜೀವಂತವಾಗಿ ಮೈದೋರುತ್ತಾ ಕ್ರಮೇಣ ಸಾಧುವಿನ ನಿತ್ಯ ಸಹಚರನಾಗಿಬಿಟ್ಟಿದ್ದನು. ಈ ವಿಚಾರ ಯಾರಿಗೂ ತಿಳಿಯದಿದ್ದರೂ ಮೊದಲ ದರ್ಶನದಲ್ಲಿಯೇ ಶ್ರೀರಾಮಕೃಷ್ಣರು ಈ ಗೂಢ ರಹಸ್ಯವನ್ನು ಕಂಡುಹಿಡಿದಿದ್ದರು. ಆದ್ದರಿಂದಲೇ ಶ್ರೀರಾಮಕೃಷ್ಣರು ಪ್ರಥಮ ಭೇಟಿಯಿಂದಲೇ ಜಟಾಧಾರಿಯನ್ನು ಶ್ರದ್ಧಾಭಕ್ತಿಯಿಂದ ಕಾಣುತ್ತಾ, ಆತನ ಆವಶ್ಯಕತೆಗಳನ್ನೆಲ್ಲಾ ಪೂರೈಸುತ್ತಾ, ಸದಾ ಅವರೊಡನೆ ಇರುತ್ತಿದ್ದರು. ಕ್ರಮೇಣ ಆ ಬಾಲರಾಮನು ಶ್ರೀರಾಮಕೃಷ್ಣರೆಡೆಗೆ ಆಕರ್ಷಿತನಾಗಿ ಹೆಚ್ಚುಕಾಲ ಅವರೊಡನೆ ಆಟವಾಡಿಕೊಂಡಿರುತ್ತಿದ್ದನು. ದಿನ ಕಳೆದಂತೆ ರಾಮಲಾಲನಿಗೆ ಶ್ರೀರಾಮಕೃಷ್ಣರ ಮೇಲೆ ಪ್ರೀತಿ ಅಧಿಕವಾಗಿ ಅವರೊಡನೇ ಇದ್ದುಬಿಡುತ್ತಿದ್ದ. ಬಿಸಿಲಿನಲ್ಲಿ ಓಡುವುದು, ಮುಳ್ಳುಗಿಡದಲ್ಲಿ ಹೂ ಕೀಳುವುದು, ಗಂಗೆಯಲ್ಲಿ ಇಳಿದು ನೀರು ಎರಚುವುದು, ತುಟಿ ತಿರುಗಿಸುತ್ತ ಅಣಕಿಸುವುದು, ಹೀಗೆ ತನ್ನ ಬಾಲಚೇಷ್ಟೆಗಳಿಂದ ಶ್ರೀರಾಮಕೃಷ್ಣರನ್ನು ಸತಾಯಿಸುತ್ತಿದ್ದ. ಕೆಲವೊಮ್ಮೆ ಅವನ ತುಂಟತನ ತಾಳಲಾಗದೆ ಶ್ರೀರಾಮಕೃಷ್ಣರು ಅವನಿಗೆ ಒಂದೆರಡು ಏಟು ಕೊಡುತ್ತಿದ್ದರು.


ಶ್ರೀರಾಮಕೃಷ್ಣರು ಪೂಜಿಸಿದ ರಾಮಲಾಲ

ಇನ್ನೊಂದು ಸಂದರ್ಭದಲ್ಲಿ ಅವನಿಗಾಗಿ ವೇದನೆಯನ್ನು ಅನುಭವಿಸುತ್ತಾ ಬಹಳವಾಗಿ ಅಳಬೇಕಾದ ಪ್ರಸಂಗ ಬಂದಿತಂತೆ. ಒಂದು ದಿನ ರಾಮಲಾಲನು ತಿನ್ನಲು ಏನಾದರೂ ಕೊಡೆಂದು ಶ್ರೀರಾಮಕೃಷ್ಣರನ್ನು ಒತ್ತಾಯಪಡಿಸತೊಡಗಿದ. ಬೇರೇನೂ ಇಲ್ಲದ ಕಾರಣ ಶ್ರೀರಾಮಕೃಷ್ಣರು ಭತ್ತದ ಅರಳನ್ನು ಕೊಟ್ಟರು. ಸ್ವಲ್ಪ ಭತ್ತ ಹಾಗೇ ಇದ್ದ ಕಾರಣ ರಾಮಲಾಲನ ಮೃದುವಾದ ನಾಲಿಗೆಯಲ್ಲಿ ಗಾಯವಾಯಿತು. ಕೌಸಲ್ಯೆಯು ಅತ್ಯಂತ ಆದರದಿಂದ ಬೆಣ್ಣೆ, ಕೆನೆಹಾಲು, ಇತ್ಯಾದಿಗಳನ್ನು ಉಣಿಸುತ್ತಿದ್ದ ಮೃದುವಾದ ಬಾಯಿಗೆ ಇಂತಹ ತುಚ್ಛ ಆಹಾರ ಕೊಟ್ಟುಬಿಟ್ಟೆನಲ್ಲಾ ಎಂದು ಶ್ರೀರಾಮಕೃಷ್ಣರು ಪರಿತಪಿಸುತ್ತಾ ಬಿಕ್ಕಿ ಬಿಕ್ಕಿ ಅತ್ತುಬಿಟ್ಟರಂತೆ! ಶ್ರೀರಾಮಕೃಷ್ಣರ ಕೃಪೆಯಿಂದ ಆ ಜಟಾಧಾರಿಯ ಸಾಧನೆ ಪರಿಪೂರ್ಣವಾಗಿ ಪ್ರೇಮಾಭಕ್ತಿಯ ಅತ್ಯುನ್ನತ ಸ್ಥಿತಿಯನ್ನು ತಲುಪಿ, 'ರಾಮಲಾಲನ ಸುಖವೇ ನನ್ನ ಸುಖ' ಎಂದು ತಿಳಿದು, ಶ್ರೀರಾಮಕೃಷ್ಣರ ಬಳಿಯೇ ರಾಮಲಾಲನನ್ನು ಬಿಟ್ಟು ಹೊರಟು ಹೋದನು. ಅಂದಿನಿಂದ ರಾಮಲಾಲ ಇವರ ಬಳಿಯೇ ಇದ್ದುಬಿಟ್ಟನು.



## ಶ್ರೀರಾಧೆಯ ದಿವ್ಯರೂಪ

ಶ್ರೀಜಗದಂಬೆಯ ಪೂಜಾ ಸೇವಾದಿಗಳನ್ನು ಮಾಡುತ್ತಿದ್ದ ಶ್ರೀರಾಮಕೃಷ್ಣರಿಗೆ ಈಗ ಶ್ರೀಕೃಷ್ಣನ ದರ್ಶನಕ್ಕಾಗಿ ಹಾಗೂ ಅವನನ್ನು ಪತಿಯಂತೆ ಪಡೆಯಲು ಮನ ಹಾತೊರೆಯತೊಡಗಿತು. ಆದರೆ ಶ್ರೀಮತಿ ರಾಧಾರಾಣಿಯ ಕೃಪೆಯಿಲ್ಲದೆ ಶ್ರೀಕೃಷ್ಣನ ದರ್ಶನ ಸಾಧ್ಯವಿಲ್ಲವೆಂದು ಮನಗಂಡ ಶ್ರೀರಾಮಕೃಷ್ಣರು ಅವಳನ್ನೇ ಪೂರ್ಣ ಮನಸ್ಸಿನಿಂದ ಧ್ಯಾನಿಸತೊಡಗಿದರು. ಅವಳನ್ನೇ ನಿರಂತರವಾಗಿ ಪ್ರಾರ್ಥಿಸತೊಡಗಿದರು. ತಮ್ಮ ವ್ಯಾಕುಲತೆಯ ತೀವ್ರತೆಯಿಂದಾಗಿ ಬಹುಬೇಗ ದರ್ಶನ ಪಡೆದರು. ಹಿಂದಿನ ದೇವದೇವಿಯರ ದರ್ಶನದ ಸಂದರ್ಭದಲ್ಲಿ ಆದಂತೆಯೇ ಈಗಲೂ ಶ್ರೀರಾಧೆಯು ಶ್ರೀರಾಮಕೃಷ್ಣರ ದೇಹವನ್ನು ಪ್ರವೇಶಿಸಿದಳು. ''ಶ್ರೀಕೃಷ್ಣ ಪ್ರೇಮದಲ್ಲಿ ಸರ್ವಸ್ವವನ್ನೂ ಸಮರ್ಪಿಸಿದ ಆ ನಿರುಪಮ ಪವಿತ್ರ ಉಜ್ವಲ ಮೂರ್ತಿಯ ಮಹಿಮೆ ಮತ್ತು ಮಾಧುರ್ಯವನ್ನು ವರ್ಣಿಸಲು ಸಾಧ್ಯವಿಲ್ಲ. ಶ್ರೀಮತಿಯ ಅಂಗಕಾಂತಿಯು ನಾಗಸಂಪಿಗೆ ಹೂವಿನ ಕೇಸರದಂತೆ ಗೌರವರ್ಣದಿಂದ ಕೂಡಿತ್ತು'' ಎಂದು ತಮ್ಮ ದರ್ಶನದ ಕುರಿತಾಗಿ ಹೇಳುತ್ತಿದ್ದರು.

ಈ ದರ್ಶನವಾದ ನಂತರ ಶ್ರೀರಾಧೆಯೊಡನೆ ಸಂಪೂರ್ಣ ಒಂದಾಗಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನೇ ಮರೆತಿದ್ದರು. ಪುರುಷ ಪ್ರಜ್ಞೆಯೇ ಹೊರಟುಹೋಗಿ ಸ್ತ್ರೀಯರಂತೆಯೇ ವ್ಯವಹರಿಸುತ್ತಿದ್ದರು. ಆ ದಿನಗಳಲ್ಲಿ ಶ್ರೀರಾಮಕೃಷ್ಣರು ಸ್ತ್ರೀಯರೊಡನೆ ಇದ್ದಾಗ ಅತ್ಯಂತ ಪರಿಚಿತರಿಗೂ ಅವರನ್ನು ಗುರುತಿಸುವುದು ಕಷ್ಟವಾಗುತ್ತಿತ್ತಂತೆ. ಶ್ರೀರಾಧೆ ಮತ್ತು ಶ್ರೀಚೈತನ್ಯರಂತೆ ತಮ್ಮಲ್ಲೂ ಮಧುರಭಾವದ ಪರಾಕಾಷ್ಠೆಯಾದ ಮಹಾಭಾವದ (ಹತ್ತೊಂಬತ್ತು ಪ್ರಕಾರದ ಭಾವಗಳ ಸಮಾವೇಶ) ಲಕ್ಷಣಗಳು ಕಾಣಿಸಿಕೊಂಡವೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

## ಶ್ರೀಕೃಷ್ಣನ ದಿವ್ಯರೂಪ

ಶ್ರೀರಾಧೆಯ ದರ್ಶನದ ನಂತರ ಅವರಲ್ಲಿ ಶ್ರೀಕೃಷ್ಣನಿಗಾಗಿ ವಿರಹವೇದನೆ ತೀವ್ರವಾಯಿತು. ಆಹಾರ, ನಿದ್ರಾದಿಗಳು ದೂರವಾದವು. ತೀವ್ರ ಉತ್ಕಂಠತೆಯಿಂದ ಮನಸ್ಸು ಅಸ್ಥಿರವಾಯಿತು. ವಿರಹದ ತೀವ್ರ ವೇದನೆಯಿಂದಾಗಿ ಅವರ ರೋಮಕೂಪಗಳಲ್ಲಿ ರಕ್ತ ಒಸರುತ್ತಿತ್ತು. ಅವರ ಮಧುರಭಾವವು ಪರಿಪೂರ್ಣತೆಯನ್ನು ಮುಟ್ಟಿದಾಗ ಸಚ್ಚಿದಾನಂದಮೂರ್ತಿ ಶ್ರೀಕೃಷ್ಣನ ದರ್ಶನವಾಯಿತು. ಹಿಂದಿನಂತೆಯೇ ಆ ಮೂರ್ತಿಯು ಅವರ ಶರೀರವನ್ನು ಪ್ರವೇಶಿಸಿತು.



ಮತ್ತೊಂದು ದಿನ ಶ್ರೀರಾಮಕೃಷ್ಣರು ವಿಷ್ಣುಮಂದಿರದ ಮುಂದಿದ್ದ ವರಾಂಡದಲ್ಲಿ ಭಾಗವತ ಕೇಳುತ್ತಾ ಕುಳಿತಿದ್ದಾಗ ಶ್ರೀಕೃಷ್ಣನ ಜ್ಯೋತಿರ್ಮಯ ಮೂರ್ತಿಯನ್ನು ಕಂಡರು. ಆ ಮೂರ್ತಿಯ ಪಾದಪದ್ಮದಿಂದ ಒಂದು ಜ್ಯೋತಿಯ ಕಿರಣ ಹೊರಬಂದು ಮೊದಲು ಭಾಗವತ ಗ್ರಂಥವನ್ನು ಸ್ಪರ್ಶಿಸಿ, ನಂತರ ಅವರ ಎದೆಯನ್ನು ಸ್ಪರ್ಶಿಸಿ ಮೂರನ್ನೂ ಒಟ್ಟುಗೂಡಿಸಿತು. ಈ ದರ್ಶನದ ನಂತರ ಅವರು, 'ಭಾಗವತ, ಭಕ್ತ, ಭಗವಂತ – ಮೂರೂ ಒಂದೇ' ಎನ್ನುತ್ತಿದ್ದರು.

ಒಮ್ಮೆ ಭಕ್ತರು ಅವರನ್ನು ಕಲ್ಕತ್ತದ ಮೈದಾನದಲ್ಲಿ ಆಕಾಶ ಬುಟ್ಟಿಗಳ ಹಾರಾಟವನ್ನು ನೋಡಲು ಕರೆದೊಯ್ದರು. ಅದನ್ನು ನೋಡಲು ಅನೇಕ ಜನ ನೆರೆದಿದ್ದರು. ಅಲ್ಲಿ ಒಬ್ಬ ಆಂಗ್ಲ ಹುಡುಗ ಒಂದು ಮರಕ್ಕೆ ತ್ರಿಭಂಗಿಯಾಗಿ ಒರಗಿಕೊಂಡು ನಿಂತಿದ್ದ. ಆ ದೃಶ್ಯ ದೃಷ್ಟಿಗೋಚರವಾದದ್ದೇ ತಡ ಶ್ರೀಕೃಷ್ಣನ ಉದ್ದೀಪನವಾಗಿ ಸಮಾಧಿಸ್ಥರಾಗಿಬಿಟ್ಟರು. *('ಶ್ರೀರಾಮಕೃಷ್ಣ ವಚನವೇದ', ಭಾಗ ೧, ಪು. ೧೯೫ ಮತ್ತು ೬೦೮)*

### ಮೊಹಮ್ಮದ್ ಪೈಗಂಬರರ ದಿವ್ಯರೂಪ

ಒಮ್ಮೆ ಇಸ್ಲಾಂ ಸಾಧಕ ಗೋವಿಂದ ರಾಯ್ ಎಂಬ ವ್ಯಕ್ತಿಯು ದಕ್ಷಿಣೇಶ್ವರಕ್ಕೆ ಬಂದನು. ಕ್ಷತ್ರಿಯ ಜಾತಿಯವನಾಗಿದ್ದರೂ ಅನೇಕ ಸಂಪ್ರದಾಯಗಳ ಪರಿಚಯ ಪಡೆದು ಕೊನೆಗೆ ಇಸ್ಲಾಂ ಧರ್ಮದಿಂದ ಆಕರ್ಷಿತನಾಗಿ ದೀಕ್ಷೆ ಪಡೆದು, ನಿತ್ಯವೂ ಕೊರಾನನ್ನು ಪಠಿಸುತ್ತಾ, ಅದನ್ನನುಸರಿಸಿ ಸಾಧನೆಯಲ್ಲಿ ತೊಡಗಿದ್ದನು. ಶ್ರೀರಾಮಕೃಷ್ಣರು ಭಾವುಕ ಗೋವಿಂದನ ಸರಳ ವಿಶ್ವಾಸವನ್ನು, ಪ್ರೀತಿಯನ್ನೂ ಕಂಡು ಮುಗ್ಧರಾಗಿ ಅವನೆಡೆಗೆ ಆಕರ್ಷಿತರಾದರು.

ಕೆಲವೇ ದಿನಗಳಲ್ಲಿ ಆ ಆಕರ್ಷಣೆ ಇಸ್ಲಾಂ ಧರ್ಮವನ್ನು ಅನುಸರಿಸಿತು. ಇದೂ ಭಗವಂತನೆಡೆ ಕರೆದೊಯ್ಯುವ ಒಂದು ಮಾರ್ಗ. ಇದರಲ್ಲಿ ಜನ ಹೇಗೆ ಕೃತಾರ್ಥರಾಗುವರು ಎಂಬ ಕುತೂಹಲ ಮೂಡಿದ್ದೇ ತಡ, ಕಾರ್ಯೋನ್ಮುಖರಾದರು. ಗೋವಿಂದನಿಂದ ದೀಕ್ಷೆ ಪಡೆದು ಇಸ್ಲಾಂ ಧರ್ಮದ ಸಾಧನೆ ಪ್ರಾರಂಭಿಸಿದರು. 'ಅಲ್ಲಾ' ಮಂತ್ರವನ್ನು ಜಪಿಸುತ್ತಾ, ಮುಸಲ್ಮಾನರಂತೆ ಉಡುಪು ಧರಿಸುತ್ತಿದ್ದರು. ದಿನದ ಮೂರು ಸಂಧಿಕಾಲಗಳಲ್ಲಿ ನಮಾಜ್ ಮಾಡತೊಡಗಿದರು. ಮುಸಲ್ಮಾನರಿಗೆ ಪ್ರಿಯವಾದ ಗೋಮಾಂಸ ಸೇವಿಸುವ ಇಚ್ಛೆಯೂ ಮೂಡಿತೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಆದ್ದರಿಂದ ಮಥುರನು ಬ್ರಾಹ್ಮಣ ಅಡಿಗೆಯವನನ್ನು ಗೊತ್ತು ಮಾಡಿ ಮುಸಲ್ಮಾನರ ರೀತಿಯ ಆಹಾರ ಸಿದ್ಧಪಡಿಸುತ್ತಿದ್ದನು. ಆ ದಿನಗಳಲ್ಲಿ ಹಿಂದೂಭಾವವು ಅವರ ಮನಸ್ಸಿನಿಂದ ಸಂಪೂರ್ಣ ಹೊರಟುಹೋಯಿತು. ತಮಗೆ ಅತ್ಯಂತ ನಿಕಟಳೂ, ಆಪ್ತಳೂ ಆದ ಕಾಳಿದೇವಿಯ ದರ್ಶನಕ್ಕಾಗಿ ಒಮ್ಮೆಯೂ ಮಂದಿರಕ್ಕೆ ಹೋಗಲಿಲ್ಲವಂತೆ! ಮೂರೇ ದಿನಗಳಲ್ಲಿ ಸಾಧನೆಯ ಫಲ ಹಸ್ತಗತವಾಯಿತೆನ್ನುತ್ತಾರೆ ಶ್ರೀರಾಮಕೃಷ್ಣರು. ನೀಳಗಡ್ಡದಿಂದ ಕೂಡಿದ ಗಂಭೀರ ಭಾವದ ಜ್ಯೋತಿರ್ಮಯ ಪುರುಷನ ದಿವ್ಯದರ್ಶನವನ್ನು ಪಡೆದರು.



### ಕ್ರಿಸ್ತನ ದಿವ್ಯರೂಪ

ಒಮ್ಮೆ ಶ್ರೀರಾಮಕೃಷ್ಣರಿಗೆ ಶಂಭುಮಲ್ಲಿಕನೆಂಬ ಕ್ರೈಸ್ತ ಭಕ್ತನ ಪರಿಚಯವಾಯಿತು. ಆತ ನಿತ್ಯವೂ ಬೈಬಲ್ ಓದುತ್ತಿದ್ದ. ಆತನ ಮೂಲಕ ಕ್ರಿಸ್ತನ ಜೀವನ, ಸ್ಥಾಪಿಸಿದ ಧರ್ಮ ಇತ್ಯಾದಿ ಮಾಹಿತಿ ಪಡೆದು ಕ್ರೈಸ್ತಧರ್ಮ ಸಾಧನೆ ಮಾಡಬೇಕೆನಿಸಿತು. ಕೂಡಲೆ ಜಗನ್ಮಾತೆಯ ಕೃಪೆಯಿಂದ ಎಲ್ಲ ಅನುಕೂಲಗಳು ಆದವು. ದಕ್ಷಿಣೇಶ್ವರದ ಕಾಳೀಮಂದಿರದ ಬಳಿ ಯದುನಾಥ ಮಲ್ಲಿಕನ ತೋಟದ ಮನೆಯಿತ್ತು. ಆಗಾಗ್ಗೆ ಶ್ರೀರಾಮಕೃಷ್ಣರು ಅಲ್ಲಿಗೆ ಹೋಗಿ ಓಡಾಡಿ ಬರುತ್ತಿದ್ದರು. ಅವರ ಮನೆಯ ಬೈಠಕ್ ಖಾನೆಯಲ್ಲಿ ಅನೇಕ ಒಳ್ಳೆಯ ಚಿತ್ರಗಳಿದ್ದವು. ತಾಯಿಯ ಮಡಿಲಿನಲ್ಲಿ ಇರುವ ಬಾಲಕ್ರಿಸ್ತನ ಚಿತ್ರವೂ ಅವುಗಳಲ್ಲಿ ಒಂದು. ಒಂದು ದಿನ ಅವರು ಕ್ರಿಸ್ತನ ಅದ್ಭುತ ಜೀವನಕಥೆಯನ್ನು ಸ್ಮರಿಸಿಕೊಳ್ಳುತ್ತಾ ಆ ಚಿತ್ರವನ್ನೇ ತನ್ಮಯರಾಗಿ ನೋಡುತ್ತಿದ್ದರು. ಇದ್ದಕ್ಕಿದ್ದಂತೆ, ಆ ಚಿತ್ರವು ಜೀವಂತವಾಗಿ ಜ್ಯೋತಿರ್ಮಯವಾಯಿತು. ದೇವಮಾತೆ ಮತ್ತು ದೇವಶಿಶುವಿನ ಅಂಗಗಳಿಂದ ಜ್ಯೋತಿ ಕಿರಣಗಳು ಶ್ರೀರಾಮಕೃಷ್ಣರ ದೇಹವನ್ನು ಪ್ರವೇಶಿಸಿ ಆಂತರ್ಯದಲ್ಲಿ ಆಮೂಲಾಗ್ರ ಪರಿವರ್ತನೆಯನ್ನುಂಟುಮಾಡತೊಡಗಿದವು. ಹೊಸ ಸಂಸ್ಕಾರಗಳು ಉದಯಿಸಿ, ಅವರ ಜನ್ಮಗತ ಹಿಂದೂ ಸಂಸ್ಕಾರಗಳನ್ನೆಲ್ಲಾ ಮೂಲೆಗೆ ತಳ್ಳಿದವು. ಕ್ರಿಸ್ತ ಹಾಗೂ ಕ್ರೈಸ್ತ ಧರ್ಮದಲ್ಲಿ ಪೂರ್ಣ ಶ್ರದ್ಧೆ, ವಿಶ್ವಾಸ ಮೂಡಿ ಕಾಳೀಮಂದಿರಕ್ಕೆ ಹೋಗುವುದನ್ನೇ ಮರೆತುಬಿಟ್ಟರು. ಮೂರು ದಿನಗಳವರೆಗೆ ಈ ಭಾವತರಂಗಗಳು ಅವರ ಮನಸ್ಸನ್ನು ಸಂಪೂರ್ಣವಾಗಿ ಆಕ್ರಮಿಸಿತು. ಮೂರನೇ ದಿನದ ಕೊನೆಯಲ್ಲಿ ಪಂಚವಟಿಯಲ್ಲಿ ಓಡಾಡುತ್ತಿರುವಾಗ ಒಂದು ಅದ್ಭುತ ದೃಶ್ಯವನ್ನು ಕಂಡರು. ಸುಂದರ ದಿವ್ಯ ಪುರುಷನೊಬ್ಬನು ಶ್ರೀರಾಮಕೃಷ್ಣರನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಾ ಗಂಭೀರವಾಗಿ

ಇವರೆಡೆಗೆ ನಡೆದುಬರುತ್ತಿದ್ದನು. ವಿಶಾಲವಾದ ಕಣ್ಣುಗಳು, ವಿದೇಶಿಯಂತೆ ಕಾಣುತ್ತಿರುವ ಬಿಳಿಯ ಮೈಬಣ್ಣ, ಮುಖದಲ್ಲಿ ಅಪೂರ್ವ ಶೋಭೆ, ಸ್ವಲ್ಪ ಚಪ್ಪಟೆ ಮೂಗು, ಅತ್ಯಂತ ಸೌಮ್ಯ ಮುಖಮಂಡಲವನ್ನು ನೋಡಿ ಆಶ್ಚರ್ಯಚಕಿತರಾದರು. ಆ ದಿವ್ಯಮೂರ್ತಿ ಶ್ರೀರಾಮಕೃಷ್ಣರನ್ನು ಆಲಂಗಿಸಿ ಅವರಲ್ಲಿ ಲೀನವಾಯಿತು. 'ಈತನೇ ಏಸು ಕ್ರಿಸ್ತನು!' ಎಂಬ ಧ್ವನಿ ಹೃದಯದಲ್ಲಿ ಮೊಳಗುತ್ತಿದ್ದಂತೆ ಅವರು ಸಮಾಧಿಸ್ಥರಾದರು.

### ಮಾಯಾದರ್ಶನ

ಶ್ರೀರಾಮಕೃಷ್ಣರಿಗೆ ಒಮ್ಮೆ ಶ್ರೀಜಗನ್ಮಾತೆಯ ಮೋಹ-ಮಾಯೆಯ ದರ್ಶನ ಪಡೆಯಬೇಕೆನಿಸಿತು. ಆ ಇಚ್ಛೆ ಅವರಲ್ಲಿ ಮೂಡುವುದೇ ತಡ ಜಗನ್ಮಾತೆ ಶೀಘ್ರವಾಗಿ ಆ ಅನುಭವವನ್ನು ದಯಪಾಲಿಸಿದಳು. ಒಂದು ದಿನ ಸುಂದರ ಮಹಿಳೆಯೊಬ್ಬಳು ಗಂಗಾನದಿಯಿಂದ ಮೇಲೆದ್ದು ಬಂದು ನಿಧಾನವಾಗಿ ಹೆಜ್ಜೆ ಹಾಕುತ್ತಾ ಪಂಚವಟಿಗೆ ಬಂದಳು. ಶ್ರೀರಾಮಕೃಷ್ಣರು ನೋಡುತ್ತಿದ್ದಂತೆ ಆಕೆ ಗರ್ಭವತಿಯಾಗಿ ಸುಂದರ ಶಿಶುವನ್ನು ಹೆತ್ತು ಅತ್ಯಂತ ಮಮತೆಯಿಂದ ಮುದ್ದಿಸತೊಡಗಿದಳು. ಮರುಕ್ಷಣವೇ ಕರಾಳವದನಳಾಗಿ ಆ ಶಿಶುವನ್ನು ತಿಂದು ಮತ್ತೆ ಗಂಗೆಯನ್ನು ಪ್ರವೇಶಿಸಿದಳು.

### ಷೋಡಶೀದೇವಿಯ ದಿವ್ಯರೂಪ



ಮೋಹಿನಿ-ಮಾಯೆಯ ದರ್ಶನವಾದ ನಂತರ ಶ್ರೀರಾಮಕೃಷ್ಣರು ಅದೆಷ್ಟು ದೇವಿಯರ ಮೂರ್ತಿಗಳನ್ನು ಕಂಡರೋ ಅದಕ್ಕೆ ಮಿತಿಯೇ ಇರಲಿಲ್ಲ. ಕೆಲವು ದ್ವಿಭುಜ, ಕೆಲವು ದಶಭುಜ- ಹೀಗೆ ಅನೇಕ ಬಗೆಯ ರೂಪಗಳನ್ನು ದರ್ಶಿಸಿದರು. ಎಲ್ಲರೂ ಅಪೂರ್ವ ಸೌಂದರ್ಯದಿಂದ ಕಂಗೊಳಿಸುತ್ತಿದ್ದರು. ಆದರೆ ಶ್ರೀರಾಜರಾಜೇಶ್ವರೀ ಅಥವಾ ಷೋಡಶೀ ಮೂರ್ತಿಯ ಸೌಂದರ್ಯಕ್ಕೆ ಇವರಾರೂ ಹೋಲಿಕೆಯಿಲ್ಲ ಎನ್ನುತ್ತಿದ್ದರು. 'ಷೋಡಶೀ ಮೂರ್ತಿಯ ಅಂಗದಿಂದ ರೂಪ ಸೌಂದರ್ಯವು ಕರಗಿ, ಸುತ್ತಲೂ ಹರಡಿ ನಾಲ್ಕೂ ದಿಕ್ಕನ್ನು ಬೆಳಗುತ್ತಿದ್ದುದನ್ನು ಕಂಡೆ' ಎಂದು ಷೋಡಶೀದೇವಿಯ ಸೌಂದರ್ಯ ಕುರಿತು ಹೇಳುತ್ತಿದ್ದರು. *(ವಚನವೇದ ಭಾಗ-೧, ಪು.ಸಂ. ೧೯೫)*

### ಇತರ ರೂಪಗಳು

ಇಷ್ಟೇ ಅಲ್ಲದೆ ಭೈರವ ಮುಂತಾದ ಇನ್ನೂ ಅನೇಕ ದೇವತೆಗಳ ದಿವ್ಯ ರೂಪದರ್ಶನಗಳೂ ಆಗಿದ್ದವು. 'ತಂತ್ರಸಾಧನೆಯ ಸಮಯದಿಂದ ಹಿಡಿದು ಶ್ರೀರಾಮಕೃಷ್ಣರ ಜೀವನದಲ್ಲಿ ಪ್ರತಿನಿತ್ಯ ಏನೇನು ಅಲೌಕಿಕ ಅನುಭವಗಳಾಗುತ್ತಿದ್ದವೋ ಅವೆಲ್ಲವನ್ನೂ ಸರಿಯಾಗಿ ವಿವರಿಸುವುದು ಮನುಷ್ಯ ಶಕ್ತಿಗೆ ಮೀರಿದ್ದು' ಎನ್ನುತ್ತಾರೆ ಸ್ವಾಮಿ ಶಾರದಾನಂದರು.

ತೀವ್ರಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರಿಗೆ ಕಿಂಚಿತ್ ಭಾವಪ್ರೇರಣೆಯಾದರೆ ಸಾಕು ಮನಸ್ಸು ಉದ್ದೀಪನವಾಗಿಬಿಡುತ್ತಿತ್ತು. ಒಮ್ಮೆ ಹದಿನಾಲ್ಕು ವರ್ಷದ ಸುಂದರ ಬಾಲಕಿಗೆ ಪೂಜೆ ಮಾಡುತ್ತಿರುವಾಗ, ಆಕೆ ಸಾಕ್ಷಾತ್ ಭಗವತಿಯೇ ಆಗಿ ಕಂಡಳೆಂದು ತಕ್ಷಣ ಆಕೆಗೆ ಒಂದು ರೂಪಾಯಿ ದಕ್ಷಿಣೆ ಕೊಟ್ಟು ಪ್ರಣಾಮ ಮಾಡಿದರು. ಮತ್ತೊಮ್ಮೆ ರಾಮಲೀಲೆ ಎಂಬ ನಾಟಕ ವೀಕ್ಷಿಸುತ್ತಿರುವಾಗ ಪಾರ್ಟ್ ವಹಿಸಿದ್ದವರು ಸಾಕ್ಷಾತ್ ರಾಮ, ಸೀತೆ, ಲಕ್ಷ್ಮಣ, ಹನುಮಂತ, ವಿಭೀಷಣರಾಗಿಯೇ ಕಂಡು ಬಂದರೆಂದು ಆ ನಟನಟಿಯರನ್ನೆಲ್ಲಾ ಪೂಜಿಸಿದ್ದರು. ಮತ್ತೊಂದು ದಿನ, ವೇಶ್ಯೆಯೊಬ್ಬಳು ನೀಲಿ ಬಣ್ಣದ ಸೀರೆ ಉಟ್ಟು ಮರದ ಹತ್ತಿರ ನಿಂತಿದ್ದನ್ನು ಕಂಡು ಸೀತೆಯ ಉದ್ದೀಪನವಾಗಿಬಿಟ್ಟಿತು. ಆಕೆ ವೇಶ್ಯೆ ಎಂಬುದನ್ನು ಮರೆತು ಸಾಕ್ಷಾತ್ ಸೀತೆಯೇ ಲಂಕೆಯಿಂದ ಬಿಡುಗಡೆ ಹೊಂದಿದವಳಾಗಿ ರಾಮನನ್ನು ಸಂಧಿಸಲು ಮುಂದುವರಿಯುತ್ತಿರುವಂತೆ ಕಂಡುಬಂದ ಕಾರಣ ಬಾಹ್ಯಜ್ಞಾನಶೂನ್ಯರಾಗಿ ಸಮಾಧಿಸ್ಥರಾದರು.

ಇನ್ನೊಂದು ದಿನ ಸಿಹೋರಿನಲ್ಲಿ ಗೋವಳರು ಸಾಕ್ಷಾತ್ ವ್ರಜದ ಗೋಪಾಲಕರಾಗಿ ಕಂಡದ್ದರಿಂದ ಪ್ರತಿಯೊಬ್ಬರ ಕೈಗೂ ಸಿಹಿತಿಂಡಿ ಕೊಟ್ಟು, ತಾವು ಅವರ ಕೈಯಿಂದಲೇ ತಿನ್ನಲಾರಂಭಿಸಿದರು.

### ಉಪಸಂಹಾರ

ಹೀಗೆ ಶ್ರೀರಾಮಕೃಷ್ಣರು ವಿವಿಧ ದೇವದೇವಿಯರ ರೂಪಗಳನ್ನು ದರ್ಶಿಸುತ್ತಾ ಸರ್ವಧರ್ಮಸಮನ್ವಯ ಮಾಡಿದ್ದಲ್ಲದೆ, ತಾವೇ ಸರ್ವದೇವದೇವೀಸ್ವರೂಪರೆಂಬುದನ್ನು ನಿರೂಪಿಸಿದ್ದಾರೆ. ಆದ್ದರಿಂದಲೇ ಎಲ್ಲ ದಿವ್ಯರೂಪಗಳೂ ಅವರಲ್ಲೇ ಐಕ್ಯವಾಗುವುದನ್ನು ನೋಡುತ್ತೇವೆ. ✽

*ಆಧಾರ ಗ್ರಂಥಗಳು:*

*೧) ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂಪುಟ ೧, ಸ್ವಾಮಿ ಶಾರದಾನಂದ*

*೨) ಶ್ರೀರಾಮಕೃಷ್ಣ ವಚನವೇದ, ಭಾಗ-೧.*